ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 77/2018

ಸಿ ಡಬ್ಲ್ಯೂ-3

ಪಿ ಡಬ್ಲ್ಯೂ-2

ದಿಃ 02-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ದುರ್ಗಾ ನಾಗಪ್ಪ ನಾಯ್ಕ |
| ತಂದೆಯ ಹೆಸರುಃ | ನಾಗಪ್ಪ |
| ವಯಸ್ಸುಃ | 36 ವರ್ಷ |
| ಉದ್ಯೋಗಃ | ಕೂಲಿ |
| ವಿಳಾಸಃ | ಯಲ್ಲಾಪುರ |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ-2 ರವರ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಮಾಹಿತಿ ಇರುವುದಿಲ್ಲ, ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಏನನ್ನೂ ಮಾಡಿರುವುದಿಲ್ಲ. ಪೊಲೀಸರು ಠಾಣೆಯಲ್ಲಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಯಾವಾಗ ಮತ್ತು ಯಾವ ವಿಷಯಕ್ಕೆ ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಎಷ್ಟು ಸಹಿ ಮಾಡಿರುತ್ತೇನೆ ಎಂದು ನೆನಪಿರುವುದಿಲ್ಲ. ಅಂದಾಜು 5-6 ವರ್ಷಗಳ ಹಿಂದೆ ಸಹಿಯನ್ನು ತೆಗೆದುಕೊಂಡಿರಬಹುದು. ಎಷ್ಟು ಸಹಿ ಮಾಡಿರುತ್ತೇನೆ ಎಂದು ಗೊತ್ತಿರುವುದಿಲ್ಲ. ಸಾಕ್ಷಿಯು ನಿಪಿ-1,2 ಮತ್ತು 3 ರ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ನಿಪಿ-1ಬಿ ರಿಂದ 3ಬಿ ಎಂದು ಗುರುತಿಸಲಾಯಿತು. ಮತ್ತೆ

ಏನನ್ನೂ ಮಾಡಿರುವುದಿಲ್ಲ. ಸಾಕ್ಷಿಯು ನಿಪಿ-4 ರಿಂದ 9 ಪೊಟೋಗಳನ್ನು ಗುರುತಿಸುತ್ತಾರೆ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

2. ದಿಃ 30-10-2017 ರಂದು ನೀವು ಸುಂಕಾಸಾಳ ಗ್ರಾಮದ ಪದ್ಮಾಪುರ ಹೆಗ್ಗಾರದಲ್ಲಿ ಅಪಘಾತದ ವಿಷಯವಾಗಿ ಪೊಲೀಸರ ಜೊತೆಗೆ ಪಂಚನಾಮೆಗೆಂದು ಹೋಗಿರುತ್ತೀರಿ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಜರುಗಿಸಲಾಯಿತು ಎಂದರೆ ಸರಿಯಲ್ಲ. ಪಂಚನಾಮೆಗೆ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಅಪಘಾತ ಸ್ಥಳಕ್ಕೆ ಸಂಬಂಧಪಟ್ಟಂತೆ ನಕಾಶೆಯನ್ನೂ ಸಹ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ತಾವು ಇರುವ ಒಟ್ಟು 8 ಪೊಟೋಗಳನ್ನು ಗುರುತಿಸಿದ್ದು, ಪೊಟೋಗಳನ್ನು ನಿಪಿ-4 ರಿಂದ 9 ಎಂದು ಗುರುತಿಸಲಾಯಿತು. ಅದೇ ದಿನ ನೀವು ವಾಹನ ಪಂಚನಾಮೆಗೂ ಸಹ ಪೊಲೀಸ್ ಠಾಣೆಗೆ ಹೋಗಿರುತ್ತೀರಿ ಎಂದರೆ ನೆನಪಿರುವುದಿಲ್ಲ. ಅಪಘಾತಕ್ಕೆ ಒಳಪಡಿಸಿದ ಲಾರಿ ನಂ. ಕೆ ಎಲ್ 05/ಎ ಎಂ 8298 ಆಗಿತ್ತು ಎಂದರೆ ಸರಿಯಲ್ಲ. ಅಪಘಾತಕ್ಕೆ ಒಳಪಟ್ಟ ಮೋಟರ್ ಸೈಕಲ್ ನಂ. ಕೆ ಎ 31/ ಡಬ್ಲ್ಯೂ -8074 ಆಗಿತ್ತು ಎಂದರೆ ಸರಿಲ್ಲ. ನಿಮಗೆ ಪಂಚನಾಮೆಗಳ ಸಂಪೂರ್ಣ ಮಾಹಿತಿ ಇದ್ದು, ಸ್ಥಳ ಪಂಚನಾಮೆ ಹಾಗೂ ವಾಹನ ಪಂಚನಾಮೆಗೆ ಹೋಗಿರುತ್ತಿರಿ ಎಂದರೆ ಸರಿಯಲ್ಲ.

ಅವುಗಳಿಗೆ ಸಂಬಂಧಪಟ್ಟಂತೆ ನಕಾಶೆ ಮತ್ತು ಪೋಟೋಗಳನ್ನು ಸಹ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಡಿ.ಎನ್.ಎನ್ ಇವರಿಂದಃ

3. ನೀವು ಅಂಕೋಲಾ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಹಾಕಿರುತ್ತೀರಿ ಎಂದರೆ ಸರಿ. ಹಾಗೂ ಅವರು ಹೇಳಿದ ಕಾರಣಕ್ಕಾಗಿ ಪೊಟಗೋಗಳಿಗೆ ನಿಂತಿರುತ್ತೇನೆ ಎಂದರೆ ಸರಿ. ಯಾವ ಕಾರಣಕ್ಕಾಗಿ ಪೊಟೋ ತೆಗೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಯಾವ ಕಾಣಕ್ಕಾಗಿ ಸಹಿ ಹಾಕಿರುತ್ತೀರಿ ಎಂದು ನಿಮಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

C/c. ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.